ಹೇಳಬೇಕಾಗಿಯೂ ಇಲ್ಲ. ಸುಮ್ಮನೆ ತಲೆಯೆತ್ತಿ ಒಂದಿಷ್ಟು ಹೊತ್ತು ಆಕಾಶ, ನಮ್ಮ ಸುತ್ತಲಿನ ಮರ, ನಾಯಿ ಇಂಥದ್ದಾವುದನ್ನಾದರೂ ಒಂದ್ಹತ್ತು ನಿಮಿಷ ಮನಸ್ಸುಕೊಟ್ಟು ನೋಡಿದರೆ ಸಾಕು. ತಾನು ಯಾರು ಅಂತ ತಿಳಿಯುತ್ತದೆ. ಎಲ್ಲರೂ ಮಾಡಿಟ್ಟಿರುವುದನ್ನು ತಿರುಗಿ ನೋಡಿದರೂ ಸಾಕು; ಬದುಕು ಎಷ್ಟು ಅಮೂಲ್ಯ ಎಂದು ಗೊತ್ತಾಗುತ್ತದೆ.

◆ **ಲಾಕ್‌ಡೌನ್ ಅವಧಿಯಲ್ಲಿ ಜನರು ಒಟಿಟಿಗೆ ಒಗ್ಗಿದ್ದಾರೆ. ಥಿಯೇಟರ್ ಸಂಸ್ಕೃತಿ ಮುಕ್ತಾಯ ಆಗುತ್ತದೆ ಎಂಬ ಮಾತಿದೆಯಲ್ಲ?**

ಕ್ಯಾಮೆರಾ ಎಂಬುದು ಆವಿಷ್ಕಾರ ಆದಾಗ ಪೇಂಟ್ ಮಾಡ್ತಿದ್ದ ಕಲಾವಿದರೆಲ್ಲ ಸತ್ತೋಗ್ಬೇಕು ಅಂತಲೇ ಅಂದುಕೊಂಡಿದ್ದರು. ಹಾಗಾದ್ರೆ ಎಲ್ಲರೂ ಸತ್ತೋದ್ರಾ? ಈವತ್ತಿಗೂ ಜನರು ಪೇಂಟಿಂಗ್ ಮಾಡ್ತಿದ್ದಾರಲ್ವಾ? ಆಗಲೇ ಇಸಂಗಳು ಹುಟ್ಟಿದ್ದು. ಈಗಲೂ ಅಷ್ಟೆ. ಎಲ್ಲೋ ಇನ್ನೊಂದು ಬಾಗಿಲು ತೆಗೆದುಕೊಳ್ಳುತ್ತದೆ. ಅದು ತೆಗೆದುಕೊಳ್ಳಲಿಕ್ಕಾಗಿಯೇ ಈ ಬಾಗಿಲು ಮುಚ್ಚಿಕೊಳ್ಳುತ್ತಿದೆ ಅಷ್ಟೆ.

◆ **ನೀವ್ಯಾಕೆ ಒಂದು ಹಾಸ್ಯ ಸಿನಿಮಾ ಮಾಡಬಾರದು?**

ನಾನು ಇದುವರೆಗೆ ಮಾಡಿದ್ದೆಲ್ಲವೂ ಕಾಮಿಡಿ ಸಿನಿಮಾಗಳೇ. ಜನರು ಜಾಸ್ತಿ ಸೀರಿಯಸ್ ಆಗಿ ನೋಡಿದ್ದಾರಷ್ಟೆ..

◆ **'ಬ್ಯಾಡ್ ಮ್ಯಾನರ್ಸ್' ಘೋಷಣೆಯಾದಾಗಿಂದಲೂ 'ಸೂರಿ ಕಾಗೆ ಬಂಗಾರ ಸಿನಿಮಾ ಮಾಡ್ತೀನಿ ಎಂದು ಕಾಗೆ ಹಾರಿಸ್ತಿದಾರೆ. ಇದು ನಿಜಕ್ಕೂ ಬ್ಯಾಡ್ ಮ್ಯಾನರ್ಸ್' ಎಂದು ಆಡಿಕೊಳ್ಳುತ್ತಿದ್ದಾರಲ್ಲಾ..**

ಇಲ್ಲ ಇಲ್ಲ... ಬಹುಶಃ ನನ್ನನ್ನು ಉಳಿಸುವುದು ಅಂಥ ಸಿನಿಮಾಗಳೇ. ಆ ರೀತಿಯ ಸಿನಿಮಾಗಳನ್ನೇ ಮುಂದೆ ಮಾಡಲಿಕ್ಕಾಗುವುದೋ ಏನೋ. ಎಲ್ಲ ಗುಂಪು ಕಟ್ಟಿಕೊಂಡು ಹೋಗಿ 'ಕಾಗೆ ಬಂಗಾರ' ಮಾಡುವುದು, ಈ ಕಡೆ 'ಬ್ಯಾಡ್ ಮ್ಯಾನರ್ಸ್' ಕೂಡ ಮಾಡುವುದು. ಯಾವ ಕಡೆಗೆ ಎಳೆದುಕೊಂಡು ಹೋಗುತ್ತದೆಯೋ ಅತ್ತ ಹೋಗುವುದು. ದೇವ್ರಾಣೆ ನಾನು ಯಾರಿಗೂ ಮೋಸ ಮಾಡಲ್ಲ. ಅದು ಗಿಮಿಕ್ ಕೂಡ ಅಲ್ಲ. 'ಕಾಗೆ ಬಂಗಾರ' ಮಾಡಬೇಕು ಅಂತಲೇ ಆಸೆ ಇತ್ತು. ಆದರೆ 'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾ ಬಿಡುಗಡೆಯಾಗಿ 21 ದಿನಕ್ಕೇ ಲಾಕ್‌ಡೌನ್ ಆಗಿ ಹೋಯ್ತಲ್ಲಾ. ಕೊರೊನಾ ಬರದೇ ಇದ್ದಿದ್ದರೆ ಖಂಡಿತವಾಗಿ ಕಾಗೆ ಬಂಗಾರ ಸಿನಿಮಾವನ್ನೇ ಮಾಡ್ತಿದ್ದೆ. ಖಂಡಿತ ಮುಂದೆ ಆ ಸಿನಿಮಾ ಮಾಡೇ ಮಾಡ್ತೀನಿ. ■





# ರಾಕಿಂಗ್ ಶಿವಣ್ಣ

ದೊಡ್ಡ ಅಭಿಮಾನಿ ಬಳಗದಿಂದ ಗುರ್ತಿಸಿಕೊಂಡವರು, ಮಾಸ್ ಡೈಲಾಗ್ ಮೂಲಕವೇ ಪಡ್ಡೆಗಳ ಎದೆಯಲ್ಲಿ ಢಮರುಗ ಭಾರಿಸುವವರು, ಬುದ್ಧಿವಂತಿಕೆಯ ಸ್ಕ್ರಿಪ್ಟ್‌ಗಳನ್ನೇ ಒಪ್ಪಿಕೊಂಡು ಸ್ಮಾರ್ಟ್ ಸ್ಟಾರ್ ಆಗಲು ಹೆಣಗುತ್ತಿರುವವರು, ಬಿಗ್ ಬಜೆಟ್ ಕಿರೀಟಧಾರಿಗಳು... ಹೀಗೆ ಚಂದನವನದ ಸ್ಟಾರ್‌ಗಳಲ್ಲಿ ಒಬ್ಬೊಬ್ಬರದು ಒಂದೊಂದು ಬಗೆ. ಆದರೆ ಯಾರ ಕೈಯಲ್ಲಿ ಹೆಚ್ಚು ಸಿನಿಮಾಗಳಿವೆ ಎಂದು ಯಾರಾದರೂ ಕೇಳಿದರೆ ಎಲ್ಲರ ಕಣ್ಣುಗಳು ಹೊರಳುವುದು ಶಿವಣ್ಣನ ಕಡೆಗೆ!

ಅತ್ತ ಮಾಸ್ ಮರಣಮೃದಂಗ ಭಾರಿಸುವವರಿಗೂ, ಇತ್ತ ಕಮರ್ಷಿಯಲ್ ಚೌಕಟ್ಟಿನೊಳಗೇ ಕಲಾತ್ಮಕ ಕುಸುರಿ ಕೆತ್ತುವವರಿಗೂ, ಪಕ್ಕದ ಭಾಷೆಯ ಒಳ್ಳೆಯ ಸಿನಿಮಾವನ್ನು ಕನ್ನಡಕ್ಕೆ ತರಬೇಕು; ಕನ್ನಡದ ಯಾವ ಸ್ಟಾರ್ ಸಂಪರ್ಕಿಸಬೇಕು ಎಂದು ಗೊಂದಲದಲ್ಲಿರುವವರಿಗೂ, ಕೌಟುಂಬಿಕ ಚಿತ್ರ ಮಾಡಲಿಕ್ಕೆ ಪಣತೊಟ್ಟವರಿಗೂ, ಬರೀ ಬಿಲ್ಡಪ್ಪುಗಳ ಮಲ್ಟಿಸ್ಟಾರ್ ಸಿನಿಮಾ ಗೋಪುರ ಕಟ್ಟಹೊರಟವರಿಗೂ ಎಲ್ಲರಿಗೂ ಸುಲಭವಾಗಿ ಕಾಣುವವರು ಮತ್ತು 'ಕೈಗೆಟುಕುವ' ಸ್ಟಾರ್ ಶಿವಣ್ಣ. ಹಾಗಾಗಿಯೇ ಅವರ ಕೈಯಲ್ಲಿ ಯಾವತ್ತೂ ಬೆರಳುಗಳಿಗೆ ನಿಲುಕದಷ್ಟು ಸಿನಿಮಾಗಳಿರುತ್ತವೆ. ಸರತಿ ಸಾಲಲ್ಲಿ ನಿಂತು ಒಂದೊಂದಾಗಿ ಅನೌನ್ಸ್ ಆಗುತ್ತಿರುತ್ತವೆ. ಇನ್ನು ಅವರು ಕತೆ ಕೇಳಿ 'ಖಂಡಿತ ಮಾಡೋಣ' ಎಂದು ಭರವಸೆ ಕೊಟ್ಟ ಸಿನಿಮಾಗಳ ಸಂಖ್ಯೆ ಇನ್ನೆಷ್ಟೋ!

ಅಂದಹಾಗೆ ಇಷ್ಟೆಲ್ಲ ಬೇಡಿಕೆ ಉಳಿಸಿಕೊಂಡಿರುವ, 'ನಿರ್ಮಾಪಕರ ನಂಬಿಗಸ್ಥ' ನಟ ಶಿವರಾಜ್‌ಕುಮಾರ್ ಮೊನ್ನೆ ಮೊನ್ನೆಯಷ್ಟೇ ಆಚರಿಸಿಕೊಂಡಿದ್ದು 58 ನೇ ಜನ್ಮದಿನ! ಪ್ರತಿವರ್ಷ ಶಿವಣ್ಣನ ಜನ್ಮದಿನವೆಂದರೆ ಅದು ಅಭಿಮಾನಿಗಳಿಗೆ ನೆಚ್ಚಿನ ನಟನನ್ನು ಭೇಟಿಯಾಗುವ ಹಬ್ಬವಷ್ಟೇ ಅಲ್ಲ; ಶಿವಣ್ಣನ ಹಲವು ಹೊಸ ಸಿನಿಮಾಗಳ ಘೋಷಣೆಯ ದಿನವೂ ಹೌದು.

ಈ ವರ್ಷ ಕೊರೊನಾ ಕಾರಣದಿಂದಾಗಿ ಇಡೀ ಚಿತ್ರರಂಗವೇ ಸ್ತಬ್ಧವಾಗಿದೆ. ಅಂಥದ್ದರಲ್ಲಿ ಹೊಸ ಸಿನಿಮಾ ಸುದ್ದಿ ಎಲ್ಲಿಂದ ಬರುತ್ತದೆ ಎಂದು ಅಭಿಮಾನಿಗಳು ನಿರಾಸೆಯಾಗಿದ್ದರು. ಅವರ ನಿರಾಸೆಯ ಉರಿಯನ್ನು ಹೆಚ್ಚಿಸುವ ಹಾಗೆ, 'ನಾನು ಈ ವರ್ಷ ಹುಟ್ಟುಹಬ್ಬದ ದಿನ ಮನೆಯಲ್ಲಿ ಇರುವುದಿಲ್ಲ. ಯಾರೂ ನನ್ನನ್ನು ಭೇಟಿಯಾಗಲು ಬರಬೇಡಿ. ಕಾರಣ ನಿಮಗೆ ತಿಳಿದೇ ಇದೆ. ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಕಷ್ಟ. ಎಲ್ಲ ಸರಿಯಾದ ಮೇಲೆ ಭೇಟಿಯಾಗೋಣ' ಸಾಮಾಜಿಕ ಮಾಧ್ಯಮಗಳಲ್ಲಿ ಹೇಳಿಬಿಟ್ಟಿದ್ದರು.

ಆದರೆ ಕೊರೊನಾ ಮಾರಿ ಶಿವಣ್ಣನ ಸಿನಿಮಾ ರಹದಾರಿಗೆ ತಡೆಯಾಗಿಲ್ಲ. ಅವರ ಬರ್ತ್‌ಡೇ ದಿನವೇ ಎರಡು ಮೂರು ಹೊಸ ಸಿನಿಮಾಗಳು ಘೋಷಣೆಯಾಗಿವೆ. 'ದ್ರೋಣ' ಬಿಡುಗಡೆಗೆ ಸಜ್ಜಾಗಿದೆ. ಹರ್ಷ ನಿರ್ದೇಶನದ 'ಭಜರಂಗಿ 2' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ಡಾಲಿ ಧನಂಜಯ್ ತಾವು ಸದ್ಯದಲ್ಲಿಯೇ ಇನ್ನೊಂದು ಸಿನಿಮಾದಲ್ಲಿ ಶಿವಣ್ಣನ ಜೊತೆಗೆ ನಟಿಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಆರ್. ಚಂದ್ರು ನಿರ್ದೇಶನದ, ಉಪೇಂದ್ರ ನಟಿಸುತ್ತಿರುವ ಬಹುಭಾಷಾ ಚಿತ್ರದಲ್ಲಿಯೂ ಶಿವಣ್ಣ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಇದರ ಜೊತೆಗೆ ತೆಲುಗಿನ ತಂಡವೊಂದು ನಿರ್ಮಿಸುತ್ತಿರುವ ಕನ್ನಡ ಸಿನಿಮಾವೊಂದರ ಪೋಸ್ಟರ್ ಕೂಡ ಶಿವಣ್ಣನ ಜನ್ಮದಿನದಂದೇ ಬಿಡುಗಡೆಯಾಗಿದೆ. ರಾಮ್ ದುಲಿಪುಡಿ ನಿರ್ದೇಶನದ ಈ ಸಿನಿಮಾ ಮಿಲಿಟರಿ ಹಿನ್ನೆಲೆಯ ಕಥಾಹಂದರನ್ನು ಹೊಂದಿದೆ.

ಕಳೆದ ವರ್ಷ ಬಿಡುಗಡೆಯಾದ ರವಿವರ್ಮ ನಿರ್ದೇಶನದ 'ರುಸ್ತುಂ' ಸಿನಿಮಾದಲ್ಲಿ ಅವರು ಮಾಡಿದ ಡಾನ್ಸ್ ಅಭಿಮಾನಿಗಳ ಕಣ್ಣಲ್ಲಿ ನೆಟ್ಟಿದ್ದ ಬೆರಗು ಇನ್ನೂ ಮಾಸಿಲ್ಲ. ಯಾರು ಹೇಳಿದರು ಶಿವಣ್ಣನಿಗೆ ವಯಸ್ಸಾಗಿದೆ ಎಂದು? ■